ದಿನ ದರ್ಶಿಕೆ

ಫಾಲ್ಗುಣ ಮಾಸ, ನಕ್ಷತ್ರ ಸ್ವಾತಿ, ತದಿಗೆ, ಯೋಗ ಹರ್ಷಣ, ಶಕ ಸಂವತ್ಸರ 1945 ಶೋಭಕೃತ್, ಋತು- ಶಿಶಿರ, ದ್ರಿಕ್ ಆಯನ- ಉತ್ತರಾಯಣ

ಮನೆಮದ್ದು

ನೆಲ್ಲಿಕಾಯಿಯನ್ನು ಚಿಕ್ಕದಾಗಿ ತುರಿದು ರಸವನ್ನು ಹಿಂಡಿ ಒಂದು ದೊಡ್ಡ ಚಮಚದಷ್ಟು ಪ್ರಮಾಣವನ್ನು ಲೋಟ ಉಗುರುಬೆಚ್ಚನೆಯ ನೀರಿನಲ್ಲಿ ಬೆರೆಸಿ ಸೇವಿಸಬಹುದು. ನೆಲ್ಲಿಕಾಯಿಯ ಒಣಪುಡಿಯನ್ನೂ ಬಳಸಬಹುದು. ನಿತ್ಯವೂ ಸೇವಿಸುವುದರಿಂದ ಮಧುಮೇಹ ನಿಯಂತ್ರಣದಲ್ಲಿರುತ್ತದೆ.

ಸೌಂದರ್ಯ ಸೂತ್ರ

ಕುಂಬಳಕಾಯಿಯ ರಸ ತೆಗೆದು, ಅದಕ್ಕೆ ಜೇನುತುಪ್ಪ ಹಾಗೂ ಹಾಲು ಬೆರೆಸಿಕೊಂಡು ಮಿಶ್ರಣ ಮಾಡಿ. ಈ ಮಾಸ್ಕ್‌ನ್ನು ಚರ್ಮಕ್ಕೆ ಹಚ್ಚಿಕೊಂಡು 15-20 ನಿಮಿಷ ಕಾಲ ಹಾಗೆ ಬಿಡಿ. ಇದರ ಬಳಿಕ ಬಿಸಿ ನೀರಿನಿಂದ ತೊಳೆಯಿರಿ. ತ್ವಚೆಯ ಕಾಂತಿ ಹೆಚ್ಚುವುದು.

ಕಾರಂತರ ಪ್ರಭಾವಳಿಯಲ್ಲಿ ಕಿರಿಯರು

ತಾತ, ತಮ್ಮ ನಂತರದ ತಲೆಮಾರಿನ ನೂರಾರು ಯುವಕ, ಯುವತಿಯರಿಗೆ ಸ್ಫೂರ್ತಿಯಾಗಿದ್ದರು. ಅವರಲ್ಲಿ ಸಾಕಷ್ಟು ಮಂದಿ ತಾತನ ಬಗ್ಗೆ ತುಂಬಾ ಬರೆದಿದ್ದಾರೆ ಕೂಡ. ನಾನಿಲ್ಲಿ ಅವರ ಪೈಕಿ ನನಗೆ ಚೆನ್ನಾಗಿ ಗೊತ್ತಿರುವ ಕೆಲವರ ಬಗ್ಗೆಯಷ್ಟೇ ನಾಲ್ಕು ಸಾಲು ಬರೆದಿದ್ದೇನೆ.



ಭಾಗ 31

ಕಾರಂತರ ಸುಳಿಯಲ್ಲಿ
ಇಂಗ್ಲಿಷ್ ಮೂಲ
ಗ್ರೋಯಿಂಗ್ ಅಪ್ ಕಾರಂತ
ಕೆ. ಉಲ್ಲಾಸ ಕಾರಂತ, ಮಾಲವಿಕಾ ಕಪೂರ್, ಕ್ಷಮಾ ರಾವ್
ಕನ್ನಡಕ್ಕೆ ವಿಶ್ವೇಶ್ವರ ಭಟ್

ಹಿಂದಿನ ಸಂಚಿಕೆಯಿಂದ

ಪ್ರಭಾಶಂಕರ ರಾವ್ ಪಡುಕೋಣೆ (1923-2014) ತಾತನ ಹಳೆಯ ಗುರು ಸಮಾನ ರಮಾನಂದ ರಾವ್ ಅವರ ಮಗ ತಾತನಿಗೆ ತುಂಬಾ ಪರಿಚಿತರು. ತಾತ ಅವರ ಮನೆಯಲ್ಲಿ ಉಳಿದುಕೊಂಡಿದ್ದಾಗ ಪ್ರಭಾಶಂಕರ ಇನ್ನೂ ಹುಡುಗನಾಗಿದ್ದರು. ಅವರು ಚೆನ್ನಾಗಿ ಓದಿಕೊಂಡಿದ್ದ ವ್ಯಕ್ತಿ. ಭಾರತೀಯ ಹಾಗೂ ಪಾಶ್ಚಾತ್ಯ ಶಾಸ್ತ್ರೀಯ ಸಂಗೀತದಲ್ಲಿ ಆಳವಾದ ಆಸಕ್ತಿಯುಳ್ಳವರು. ಹಾಗೆಯೇ ಅವರು ಕನ್ನಡದಲ್ಲಿ ಪ್ರಸಿದ್ಧ ಹಾಸ್ಯ ಸಾಹಿತಿ ಕೂಡ. ಪಡುಕೋಣೆಯವರು ಬರೆದ 'ತೇಲಿಬಂದ ಎಲೆಗಳು' ಪ್ರಬಂಧ ಸಂಕಲನದಲ್ಲಿ ತಾತ ಹೇಗೆ ತಮ್ಮನ್ನು ಪ್ರಭಾವಿಸಿದರು ಎಂಬ ಬಗ್ಗೆ ಹೃದಯಸ್ಪರ್ಶಿಯಾಗಿ ಬರೆದಿದ್ದಾರೆ. 1989 ರಲ್ಲಿ ನ್ಯೂಯಾರ್ಕ್ ಸಿಟಿ ಹಾಗೂ ಸುತ್ತಮುತ್ತಲ ಪ್ರದೇಶಗಳಿಗೆ ಅವರು ತಾತನನ್ನು ಕರೆದುಕೊಂಡು ಸುತ್ತಾಡುವಾಗ ಕೆಲ ಸಮಯ ಅವರೊಂದಿಗೆ ಕಾಲ ಕಳೆಯುವ ಅದೃಷ್ಟ ನನ್ನದಾಗಿತ್ತು. ಅವರ ಪತ್ನಿ ವೃಂದಾ ಪಡುಕೋಣೆ (ಮುಂಡ್ಕೂರ್) ಅಮ್ಮನಿಗೆ ಬಾಲ್ಯದ ಗೆಳತಿ.

ಅದೇ ಕಾಲದ ಇನ್ನೊಬ್ಬರು ವ್ಯಕ್ತಿ ಎಚ್.ವೈ ಶಾರದಾ ಪ್ರಸಾದ್ (1924-2008). 1942ರ ಕ್ವಿಟ್ ಇಂಡಿಯಾ ಚಳವಳಿಯ ವೇಳೆ ಮೈಸೂರು ಭಾಗದಲ್ಲಿ ಬೆಂಕಿಯಂತಹ ಭಾಷಣಗಳನ್ನು ಮಾಡುತ್ತಿದ್ದ ವಿದ್ಯಾರ್ಥಿ ನಾಯಕ. ಅವರು ನೆಹರು ಸಿದ್ಧಾಂತದಿಂದ ಪ್ರಭಾವಿತರಾಗಿ, ನಂತರ ನೆಹರು-ಗಾಂಧಿ ಕುಟುಂಬಕ್ಕೆ ಬಹಳ ಆಪ್ತರಾಗಿದ್ದ ಅಧಿಕಾರಿಯಾಗಿದ್ದರು. ತಾತನ ಬಗ್ಗೆ ಶಾರದಾ ಪ್ರಸಾದ್ ಅವರಿಗೆ ಬಹಳ ಅಭಿಮಾನ. ಹಾಗೆಯೇ ತಾತನಿಗೂ ಅವರೆಂದರೆ ತುಂಬಾ ಪ್ರೀತಿ. ಅವರ ಪತ್ನಿ ಕಮಲಮ್ಮ ಕೂಡ ನಮ್ಮೆಲ್ಲರಿಗೂ ಹತ್ತಿರದವರಾಗಿದ್ದರು. ತಾತ ದೆಹಲಿಗೆ ಹೋದಾಗ ಲೋದಿ ಗಾರ್ಡನ್‌ನಲ್ಲಿದ್ದ ಅವರ ಸರ್ಕಾರಿ ಬಂಗಲೆಯಲ್ಲಿ ಉಳಿದುಕೊಳ್ಳುತ್ತಿದ್ದರು. ನಂತರ ನಾನೂ ಆಗಾಗ ದೆಹಲಿಗೆ ಕೆಲಸದ ಮೇಲೆ ಹೋದಾಗಲೂ ಅಲ್ಲೇ ಉಳಿದುಕೊಂಡಿದ್ದೆ. ತಾತ ಇಂದಿರಾ ಗಾಂಧಿಯವರ ಕಡು ವಿರೋಧಿಯಾಗಿದ್ದರೂ ಇಂದಿರಾ ಗಾಂಧಿಗೆ ಸಲಹೆಗಾರರಾಗಿದ್ದ ಶಾರದಾ ಪ್ರಸಾದ್‌ಗೆ ತುಂಬಾ ಆಪ್ತ ಸ್ನೇಹಿತರಾಗಿದ್ದರು. ಆ ಸ್ನೇಹಕ್ಕೆ ಯಾವತ್ತೂ ರಾಜಕೀಯ ನಿಲುವುಗಳಿಂದ ಚ್ಯುತಿ ಬರಲಿಲ್ಲ.

ಒಮ್ಮೆ ತಾತ ಶಾರದಾ ಪ್ರಸಾದರ ಇಬ್ಬರು ಗಂಡುಮಕ್ಕಳಾದ ರವಿ ಮತ್ತು ಸಂಜೀವ ಅವರನ್ನು ಲೋದಿ ಗಾರ್ಡನ್ಸ್‌ನಲ್ಲಿ ವಾಕಿಂಗ್‌ಗೆ ಕರೆದುಕೊಂಡು ಹೋಗಿದ್ದರಂತೆ. ಆಗ ಅಪರಿಚಿತನೊಬ್ಬ ಇವರು ನಿಮ್ಮ 'ಗ್ರಾಂಡ್ ಚಿಲ್ಡ್ರನ್ಸ್' (ಮೊಮ್ಮಕ್ಕಳು) ಹೌದೇ ಎಂದು ಕೇಳಿದ್ದನಂತೆ. ಘಟ್ಟನೇ ತಾತ ನೀಡಿದ ಮಾರುತ್ತರ ಅಲ್ಲವೇ, ಅಲ್ಲ-ಆದರೆ ಇವರಿಬ್ಬರೂ 'ಗ್ರಾಂಡ್ ಚಿಲ್ಡ್ರನ್' (ಅದ್ಭುತ ಮಕ್ಕಳು) ಖಂಡಿತ!

ಸಿನಿಮಾ ನಿರ್ದೇಶನದ ಸಂದರ್ಭ

ತಾತನಿಂದ ಪ್ರಭಾವಿತರಾದ ಇನ್ನೊಬ್ಬ ಪ್ರಮುಖ ಸಾಂಸ್ಕೃತಿಕ ಲೋಕದ ವ್ಯಕ್ತಿಯೆಂದರೆ ರಾಮೋನ್ ಮ್ಯಾಗ್ಸೆಸೆ ಪ್ರಶಸ್ತಿ ವಿಜೇತ ಕೆ.ವಿ ಸುಬ್ಬಣ್ಣ (1932-2005). ಕನ್ನಡ ಸಾಹಿತ್ಯಕ್ಕೆ, ರಂಗಭೂಮಿಗೆ ಹಾಗೂ ಪ್ರದರ್ಶನ ಕಲೆಗಳಿಗೆ ಅವರು ನೀಡಿದ ಕೊಡುಗೆ ಬಹಳ ದೊಡ್ಡದು. ಪಶ್ಚಿಮ ಘಟ್ಟದ ಮೂಲೆಯಲ್ಲಿರುವ ಹೆಗ್ಗೋಡು ಎಂಬ ಸಣ್ಣ ಹಳ್ಳಿಯಲ್ಲಿ ಕುಳಿತೇ ಅವರು ಇದನ್ನೆಲ್ಲ ಮಾಡಿದ್ದು ಎಲ್ಲರಿಗೂ ತಿಳಿದಿರುವ ವಿಚಾರ. ಸುಬ್ಬಣ್ಣ ಕೂಡ ತಾತನಂತೆ ವಿಚಾರವಾದಿಯಾಗಿದ್ದರು. ಆದರೆ ಅವರು ಸಮಾಜವಾದಿಯೂ ಆಗಿದ್ದರು. ತಾತ ಸಮಾಜವಾದಿಯಾಗಿರಲಿಲ್ಲ, ಆದರೂ ಅವರಿಬ್ಬರ ನಡುವೆ ಸಾಕಷ್ಟು ಸಮಾನ ಆಸಕ್ತಿಗಳಿದ್ದವು. ಜತೆಗೆ ಪರಸ್ಪರರ ಬಗ್ಗೆ ಪ್ರೀತಿ, ಆತ್ಮೀಯತೆ ಇತ್ತು. ಹೀಗಾಗಿ ಅವರ ನಡುವಿನ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಲೆಕ್ಕಕ್ಕೆ ಬರುತ್ತಿರಲಿಲ್ಲ. ನಾನು ಶಾಲೆಗೆ ಹೋಗುತ್ತಿದ್ದಾಗ ಸುಬ್ಬಣ್ಣ ಪುತ್ತೂರಿಗೆ ಬಂದಿದ್ದು ನೆನಪಿದೆ. ನಂತರ ತಾತನ ಜತೆ ನಾನು ಹೆಗ್ಗೋಡಿಗೆ ಅನೇಕ ಸಲ ಹೋಗಿಬಂದಿದ್ದೇನೆ. ಆಮೇಲೆ ನಾಟಕಗಳನ್ನು ನೋಡಲು ಹಾಗೂ ಸುಬ್ಬಣ್ಣ ನವರ ಮಗ (ನನ್ನ ಸ್ನೇಹಿತ) ಕೆ.ವಿ ಅಕ್ಷರ ತನ್ನ ತಂದೆಯ ಸಾಂಸ್ಕೃತಿಕ ಪರಂಪರೆಯನ್ನು, ನಾನಾ ದಿಕ್ಕಿನಲ್ಲಿ ಹೇಗೆ ವಿಸ್ತರಿಸುತ್ತಿದ್ದಾರೆಂಬುದನ್ನು ನೋಡಿ ಮೆಚ್ಚಲು ನೋಡಲು ಅಲ್ಲಿಗೆ ಹಲವು ಬಾರಿ ಹೋಗಿದ್ದೇನೆ.

ಸಾಹಿತ್ಯ ಲೋಕದ ತಾರೆಯರಿಗೆ ಸ್ಫೂರ್ತಿ

ಕನ್ನಡ ಸಾಹಿತ್ಯ ಲೋಕದ ಮುಂದಿನ ತಲೆಮಾರಿನ ಮೂವರು ದೊಡ್ಡ 'ತಾರೆ'ಯರಿಗೂ ತಾತ ಸ್ಫೂರ್ತಿಯಾಗಿದ್ದರು. ಅವರೇ ಯು.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್ ಮತ್ತು ಬಿ.ವಿ ಕಾರಂತ. ಅವರು ನಂತರದ ವರ್ಷಗಳಲ್ಲಿ ನನಗೆ ಮಿತ್ರರಾದ ಮೇಲಷ್ಟೇ ಅವರ ಮೇಲೆ ತಾತ ಎಷ್ಟು ಗಾಢ ಪ್ರಭಾವ ಬೀರಿದ್ದರು ಎಂಬುದು ನನಗೆ ಗೊತ್ತಾಯಿತು. ತಾತನ ಬೌದ್ಧಿಕ ಜ್ಞಾನ ಮತ್ತು ಹೊಸ ಹೊಸತನ್ನು ಬಗೆದು ತೆಗೆಯುವ ಉತ್ಸಾಹದ ಬಗ್ಗೆ ಅವರೆಲ್ಲ ಅಚ್ಚರಿಪಡುತ್ತಿದ್ದರು. ತಾತನ ಜತೆ ಅವರಿಗೆಲ್ಲ ಸೈದ್ಧಾಂತಿಕ ಭಿನ್ನಾಭಿಪ್ರಾಯವಿದ್ದರೂ ತಾತನ ಸಾಹಿತ್ಯಕ ಶಕ್ತಿಯ ಬಗ್ಗೆ ಅವರಿಗೆ ಅಪಾರ ಅಭಿಮಾನವಿತ್ತು.

ಆ ಮೂವರ ಪೈಕಿ ವೈಯಕ್ತಿಕವಾಗಿ ಅನಂತಮೂರ್ತಿ (1932-2014) ಅವರನ್ನು ತಾತ ತುಂಬಾ ಮೆಚ್ಚಿಕೊಳ್ಳುತ್ತಿದ್ದರು. ತಾತ ಮೈಸೂರಿನಲ್ಲಿದ್ದಾಗ ಯಾವಾಗಲೂ ಮೂರ್ತಿ ಮನೆಗೆ ಹೋಗಿ ಕಾಫಿ ಕುಡಿದು, ಮಾತನಾಡಿಕೊಂಡು ಬರುತ್ತಿದ್ದರು. ತಾತನ ಬಗ್ಗೆ ಅನಂತಮೂರ್ತಿಯವರಿಗೆ ಇದ್ದ ಅಭಿಮಾನದ ಲಾಭವನ್ನು ನಾನು ಮತ್ತು ಪ್ರತಿಭಾ ಕೂಡ ಸಾಕಷ್ಟು ಪಡೆದಿದ್ದೇವೆ. ನಮ್ಮಿಬ್ಬರ ಮೇಲೆ ಮೂರ್ತಿಯವರು ಅಪಾರ ಪ್ರೀತಿ ತೋರುತ್ತಿದ್ದರು.

ಬಿ.ವಿ ಕಾರಂತರು ತಾತನ ಪ್ರಸಿದ್ಧ ಕಾದಂಬರಿಯಾದ 'ಚೋಮನ ದುಡಿ' ಮೇಲೆ ಅದ್ಭುತವಾದ ಸಿನಿಮಾ ಮಾಡಿದ್ದರು. ಆದರೆ ತಾತನಿಗೆ ಆ ಸಿನಿಮಾ ಇಷ್ಟವಾಗಿರಲಿಲ್ಲ. ಬಿ.ವಿ ಕಾರಂತರು ಬಹಳ ಒಳ್ಳೆಯ ಮನುಷ್ಯ. ಕನ್ನಡ ರಂಗಭೂಮಿಯಲ್ಲಿ ಅಪಾರ ಸಾಧನೆ ಮಾಡಿದ ಅದ್ಭುತ ಪ್ರತಿಭೆ. ಆದರೆ ತಾತನಿಗೆ ಹೋಲಿಸಿದರೆ ಸ್ವಲ್ಪ ಅಶಿಸ್ತಿನ ವ್ಯಕ್ತಿ. ಯಾವತ್ತೂ ಸಮಯಪಾಲನೆ ಮಾಡುತ್ತಿರಲಿಲ್ಲ, ಅಷ್ಟೊಂದು ಅದ್ಭುತವಾದ ಸಿನಿಮಾ ಮಾಡಿದ್ದರೂ ತಾತನಿಗೆ ಅದು ಇಷ್ಟವಾಗದಿರುವುದಕ್ಕೆ ಕಾರಣ ಬಹುಶಃ ಸಿನಿಮಾದ ಗುಣಮಟ್ಟಕ್ಕಿಂತ ಹೆಚ್ಚಾಗಿ ಬಿ.ವಿ ಕಾರಂತರ ಅಶಿಸ್ತಿನ ವ್ಯಕ್ತಿತ್ವವೇ ಇರಬೇಕು ಎಂದು ನನಗೆ ಗುಮಾನಿಯಿದೆ. ತಾತನೆಂದರೆ 'ನನಗೆ ಭಯ' ಎಂದು ಬಿ.ವಿ ಕಾರಂತರು ಒಮ್ಮೆ ನನ್ನ ಬಳಿ ಹೇಳಿದ್ದರು.

ಅನಂತಮೂರ್ತಿಯವರೊಂದಿಗೆ ಕಾರ್ಯಕ್ರಮವೊಂದರಲ್ಲಿ ಕಾರಂತರು

ನೂರಾರು ವಿಷಯಗಳಲ್ಲಿ ಆಸಕ್ತಿ

ತಾತ ನೂರಾರು ವಿಷಯಗಳಲ್ಲಿ ಆಸಕ್ತಿ ಹೊಂದಿದ್ದ 'Jack of all trades' ಎನ್ನುವಂತಹ ವ್ಯಕ್ತಿ. ಯಾವುದು ಇಷ್ಟವಾದರೂ ಅದಕ್ಕೆ ಕೈ ಹಾಕಿದ್ದೇ ಸೈ. ಹೀಗಾಗಿ ಅವರ ಸೃಜನಶೀಲ ಕೆಲಸಗಳು ಒಮ್ಮೊಮ್ಮೆ ಕಳಪೆಯಾಗಿದ್ದೂ ಉಂಟು. ಬಿ.ವಿ ಕಾರಂತರು ಮಾಡಿದ ಸಿನಿಮಾ ಅವರಿಗೆ ಇಷ್ಟವಾಗಲಿಲ್ಲವೆಂದು ಸ್ವತಃ ತಾತನೇ ತನ್ನ ಇನ್ನೊಂದು ಕಾದಂಬರಿಯಾದ 'ಕುಡಿಯರ ಕೂಸು' ಆಧಾರವಾಗಿಟ್ಟುಕೊಂಡು ಇನ್ನೂ ಚೆನ್ನಾಗಿರುವ ಸಿನಿಮಾ ಮಾಡಲು ಮುಂದಾದರು. ನಾನು ಮತ್ತು ಪ್ರತಿಭಾ ಆ ಸಿನಿಮಾದ ಚಿತ್ರೀಕರಣವನ್ನು ನೋಡಲು ಹಲವು ದಿನಗಳನ್ನು ಕಳೆದಿದ್ದೇವೆ. ಕಾದಂಬರಿಯ ಹೆಸರು ಬದಲಿಸಿ ಸಿನಿಮಾಕ್ಕೆ 'ಮಲೆಯ ಮಕ್ಕಳು' ಎಂದು ಹೆಸರಿಟ್ಟಿದ್ದರು. ಪಶ್ಚಿಮ ಘಟ್ಟದ ಸುಂದರ ಅರಣ್ಯಗಳಲ್ಲಿ ಅದರ ಚಿತ್ರೀಕರಣ ನಡೆದಿತ್ತು. ಹೀಗಾಗಿ ಸಿನಿಮಾದ ದೃಶ್ಯವೈಭವ ಅದ್ಭುತವಾಗಿತ್ತು. ಪ್ರಮುಖ ಪಾತ್ರದಲ್ಲಿ ಕನ್ನಡದ ಪ್ರಸಿದ್ಧ ನಟಿ ಕಲ್ಪನಾ ನಟಿಸಿದ್ದರು. ಆದರೆ ಚೋಮನ ದುಡಿಗೆ ಹೋಲಿಸಿದರೆ ಮಲೆಯ ಮಕ್ಕಳು ಸಿನಿಮಾ ತುಂಬಾ ಪೇಲವವಾಗಿತ್ತು. ಹೀಗಾಗಿ ವಿಮರ್ಶಕರ ಮೆಚ್ಚುಗೆ ಗಳಿಸುವಲ್ಲಿಯೂ ಸೋತಿತು, 'ಬಾಕ್ಸ್ ಆಫೀಸ್'ನಲ್ಲೂ ವಿಫಲವಾಯಿತು.

ಅನಂತಮೂರ್ತಿ-ಕಾರ್ನಾಡ್-ಕಾರಂತ ತಲೆಮಾರಿನ ಇನೊಬ್ಬ ಪ್ರಖ್ಯಾತ ಲೇಖಕರೆಂದರೆ ಕೆ.ವಿ ಪುಟ್ಟಪ್ಪನವರ (ಕುವೆಂಪು) ಮಗ ಪೂರ್ಣಚಂದ್ರ ತೇಜಸ್ವಿ (1938-2007). ತಾತನಂತೆ ಅವರಿಗೂ ಪರಿಸರದಿಂದ ಹಿಡಿದು ಫೋಟೋಗ್ರಫಿಯವರೆಗೆ ವೈವಿಧ್ಯಮಯ ವಿಷಯಗಳಲ್ಲಿ ಆಸಕ್ತಿಯಿತ್ತು. ಅವರೊಬ್ಬ ಅದ್ಭುತ ಲೇಖಕ. ಪರಿಸರ ಹಾಗೂ ಫೋಟೋಗ್ರಫಿಯಲ್ಲಿ ನನಗೂ ಆಸಕ್ತಿಯಿದ್ದುದರಿಂದ 1980ರ ದಶಕದಲ್ಲಿ ತೇಜಸ್ವಿಯವರಿಗೆ ಪರಿಚಿತನಾಗಿದ್ದೆ. ಕೆಲ ವರ್ಷಗಳ ನಂತರ ತಾತನೂ ತೇಜಸ್ವಿಯನ್ನು ಭೇಟಿಯಾದರು. ಮೊದಲ ಭೇಟಿಯಲ್ಲೇ ಇಬ್ಬರೂ ಆತ್ಮೀಯರಾಗಿ ಬಿಟ್ಟರು. 'ಕಾರಂತರನ್ನು ಇಷ್ಟು ತಡವಾಗಿ ಭೇಟಿ ಮಾಡಬಾರದಿತ್ತು, ಇನ್ನೂ ಬಹಳ ಮೊದಲೇ ಏಕೆ ಅವರ ಪರಿಚಯ ಮಾಡಿಕೊಳ್ಳಲಿಲ್ಲ ಎಂಬ ಪಶ್ಚಾತ್ತಾಪ ನನಗೆ ಕೊನೆಯವರೆಗೂ ಕಾಡಲಿದೆ' ಎಂದು ತೇಜಸ್ವಿ ನನ್ನಲ್ಲಿ ಹೇಳಿದ್ದರು. ವೈವಿಧ್ಯಮಯ ವಿಷಯಗಳಲ್ಲಿ ತಾತನ ಆಸಕ್ತಿ, ಅವುಗಳ ಬಗ್ಗೆ ಇದ್ದ ಪ್ರೀತಿ, ಹಾಗೂ ನೇರ ಪ್ರಾಮಾಣಿಕತೆ, ತೇಜಸ್ವಿಗೆ ತುಂಬಾ ಮೆಚ್ಚುಗೆಯಾಗಿದ್ದವು.

ಮುಂದುವರಿಯುವುದು...

ದಿನ ಭವಿಷ್ಯ

ಮೇಷ ನಿಮ್ಮ ಕೆಲಸ ಅಥವಾ ವ್ಯವಹಾರದಲ್ಲಿ ನೀವು ಕೆಲವು ಹೊಸತನವನ್ನು ತರಲು ಸಾಧ್ಯವಾದರೆ, ಭವಿಷ್ಯದಲ್ಲಿ ಅದರ ಪ್ರಯೋಜನಗಳನ್ನು ಪಡೆಯುತ್ತೀರಿ.

ವೃಷಭ ಹೂಡಿಕೆಗೆ ಇದು ಉತ್ತಮ ಸಮಯ, ಇದು ಕೆಲಸ ಮಾಡಲು ಹೊಸ ಉತ್ಸಾಹ ತುಂಬುತ್ತದೆ. ನಿಮ್ಮ ಆರ್ಥಿಕ ಸ್ಥಿತಿ ಬಲಪಡಿಸುತ್ತದೆ.

ಮಿಥುನ ಜೀವನ ಸಂಗಾತಿಯೊಂದಿಗಿನ ಸಂಬಂಧವು ಮಧುರವಾಗಿರುತ್ತದೆ. ಇಂದು ನೀವು ಕುಟುಂಬದಲ್ಲಿ ಸಂತೋಷ ಅನುಭವಿಸುವಿರಿ.

ಕಟಕ ಲಾಭದಾಯಕ ದಿನ. ಇಂದು ನಿಮ್ಮ ವ್ಯವಹಾರದಲ್ಲಿ ಅಪಾಯವನ್ನು ಎದುರಿಸಿದರೂ, ಮುಂದೆ ದೊಡ್ಡ ಲಾಭ ಇದೆ.

ಸಿಂಹ ವಿದ್ಯಾರ್ಥಿಗಳು ಯಶಸ್ಸನ್ನು ಪಡೆಯಲು ಶ್ರಮಿಸಬೇಕಾಗಬಹುದು. ಪೋಷಕರೊಂದಿಗಿನ ನಿಮ್ಮ ಸಂಬಂಧವು ಸೌಹಾರ್ದಯುತ.

ಕನ್ಯಾ ಸ್ನೇಹಿತರ ಸಂಪೂರ್ಣ ಬೆಂಬಲವನ್ನು ಪಡೆಯುತ್ತೀರಿ. ಈ ಸಮಯದಲ್ಲಿ ನಿಮ್ಮ ಆರ್ಥಿಕ ಸ್ಥಿತಿಯು ಅಪಾಯದಲ್ಲಿದೆ,

ತುಲಾ ಯಾವುದೇ ರೀತಿಯ ಹೂಡಿಕೆ ಮಾಡುವುದನ್ನು ತಪ್ಪಿಸಿ. ಇಂದು ನಿಮಗೆ ಹತ್ತಿರವಿರುವ ಯಾರಿಗಾದರೂ ಹಣವನ್ನು ವ್ಯವಸ್ಥೆ ಮಾಡಬೇಕಾಗಬಹುದು.

ವೃಶ್ಚಿಕ ನೀವು ಇಂದು ನಿಮ್ಮ ಪಾಲುದಾರಿಕೆಯಲ್ಲಿ ಯಾವುದೇ ವ್ಯವಹಾರವನ್ನು ಮಾಡಿದ್ದರೆ, ಅದು ಲಾಭವನ್ನು ನೀಡುತ್ತದೆ.

ಧನು ನಿಮ್ಮ ಮಕ್ಕಳ ಭವಿಷ್ಯಕ್ಕೆ ಸಂಬಂಧಿಸಿದಂತೆ ಇಂದು ನೀವು ದೊಡ್ಡ ನಿರ್ಧಾರ ತೆಗೆದುಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಹಾದಿ ಸುಗಮ.

ಮಕರ ಹಲವು ರೀತಿಯ ಕೆಲಸಗಳನ್ನು ಕೈಗೆತ್ತಿಕೊಳ್ಳುವುದರಿಂದ ಆತಂಕ ಹೆಚ್ಚಾಗಬಹುದು. ಹೊಸ ಆದಾಯದ ಮೂಲಗಳನ್ನು ಅಭಿವೃದ್ಧಿಪಡಿಸುವಿರಿ.

ಕುಂಭ ನೀವು ಸರ್ಕಾರಿ ಕೆಲಸವನ್ನು ಮಾಡಬೇಕಾದರೆ, ನೀವು ನಿಗದಿತ ನಿಯಮಗಳನ್ನು ನೋಡಿಕೊಳ್ಳಬೇಕು.

ಮೀನ ನಿಮ್ಮ ವ್ಯವಹಾರದಲ್ಲಿ ಸಮಸ್ಯೆಗಳು ಕಾಣಿಸಿಕೊಂಡಿದ್ದರೆ, ಇಂದು ನೀವು ಅವುಗಳನ್ನು ತೊಡೆದು ಹಾಕುತ್ತೀರಿ. ಮಕ್ಕಳಿಂದ ಶುಭ ವಾರ್ತೆ ಕೇಳುವಿರಿ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1939- ಕ್ರಿಕೆಟ್ ಆಟಗಾರ, ಅಂತರಾಷ್ಟ್ರೀಯ ಮ್ಯಾಚ್ ರೆಫರಿ ಹನುಮಂತ್ ಸಿಂಗ್ ಜನನ.
- 1929 - ರಂಗಕರ್ಮಿ, ಚಲನಚಿತ್ರ ನಟ ಮತ್ತು ನಿರ್ದೇಶಕ ಉತ್ಪಲ್ ದತ್ ಜನನ
- ವಿಶ್ವ ಮತ್ಸಕನ್ಯೆ ದಿನ

ಚಿತ್ರಸ್ಫೂರ್ತಿ



ಪುಸ್ತಕ ಲೋಕ

ಜಗತ್ತಿನ ಚಿಕ್ಕ ಕಾರು

1962 ರಲ್ಲಿ ಪ್ರಸ್ತುತಪಡಿಸಿದ್ದ ಇಂಗ್ಲೆಂಡಿನ ಪೀಲ್ - 50 ಕಾರು ಇಂದಿಗೂ ಜಗತ್ತಿನ ಅತ್ಯಂತ ಕಿರಿಯ ಕಾರೆಂದು ಗಿನ್ನೆಸ್ ದಾಖಲೆಯಲ್ಲಿ ರಾರಾಜಿಸುತ್ತಿದೆ. 1950ರ ದಶಕದಲ್ಲಿ ಇಂಗ್ಲೆಂಡಿನ ಪೀಲ್ ಇಂಜಿನಿಯರಿಂಗ್ ಸಂಸ್ಥೆ ಸ್ಥಾಪನೆಯಾಗಿತ್ತು. ಈ ಕಾರಣದಿಂದಲೇ ಈ ಕಾರಿಗೆ 50ರ ವಿಶೇಷಣ ನೀಡಲಾಯಿತು. ಆ ಕಾಲಕ್ಕೆ ಸಂಸ್ಥೆ ಹೊಂದಿದ್ದ ಉದ್ಯೋಗಿಗಳ ಸಂಖ್ಯೆ ಕೇವಲ ನಲವತ್ತು. ಸಂಸ್ಥೆಯ ಅಭಿಯಂತರರಾದ ಸಿರಿಲ್ ಕ್ಯಾನೆಲ್ ಮತ್ತು ಹೆನ್ರಿ ಕಿಸ್ಸಾಕ್ ಎಂಬಿಬ್ಬರು ವಿನ್ಯಾಸಗೊಳಿಸಿದ ಈ ಕಾರನ್ನು 1962 ರ ಅರ್ಲ್ಸ್ ಕೋರ್ಟ್ ಮೋಟಾರ್ ಶೋ ಪ್ರದರ್ಶನದಲ್ಲಿ ಪ್ರಥಮ ಬಾರಿಗೆ ಜಗತ್ತಿಗೆ ಪರಿಚಯಿಸಲಾಯಿತು. ಆ ಬಳಿಕ ಅದಕ್ಕೆ ಅರ್ಹ ಗಿನ್ನೆಸ್ ದಾಖಲೆಯೂ ಸಿಕ್ಕಿತು.

ಪ ದ ಬಂ ಧ



ಎಡದಿಂದ ಬಲಕ್ಕೆ:
1. ಹಿಂದೆ ಹೀಗೆ ಇತ್ತು ಎನ್ನುವ ಚರಿತ್ರೆ (4)
3. ವೈಭವೋಪೇತವಾಗಿರುವ ರಾಜನ ಮನೆ (4)
5. ಧಾನ್ಯಗಳ ಸಂಗ್ರಹ (3)
6. ನೇರವಾಗಿ ಬಂದಿರುವ ಮುಖಂಡ (3)
7. ಬೆಳಗಿನ ಜಾವ (3)
9. ದಿನದ ಎಂಟನೆಯ ಒಂದು ಭಾಗಕ್ಕೆ ಹೀಗೆನ್ನುವರು (2)
10. ತೋಟ ಅಥವಾ ಹೊಲದ ರಕ್ಷಣೆಗಾಗಿ ಸುತ್ತಲೂ ಹಾಕುವ ಮುಳ್ಳುತಂತಿ ಮೊದಲಾದ ಆವರಣ (2)
11. ಬೂದು ಬಣ್ಣದ ಪಾರಿವಾಳ! (3)
13. ಆತುರವಲ್ಲ, ಮನದ ಉತ್ಸುಕತೆ (3)
16. ವಿನಯವಂತನಾದ ಮಗ (3)
17. ಸಾಮಗ್ರಿ ಕೈ ಹಿಡಿದು ಬಂದಿದೆ (4)
18. ನಂಬಿಕಸ್ಥನಿಗೆ ಹೀಗೆ ಹೇಳುವರು (4)

ಮೇಲಿನಿಂದಕೆಳಕ್ಕೆ:
1. ಇರದೇ ತಿಳಿಸಿದ ಉದ್ದೇಶ (3)
2. ಒಳ್ಳೆಯ ನಡತೆಯೆಂದರ್ಥ (4)
3. ಅವನು ವ್ಯಕ್ತಪಡಿಸಿದ